**2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕನಕಪುರ**

***ಸಿ.ಸಿ. 1669/2023***

**ಫಿರ್ಯಾದಿ** : ರಾಜ್ಯ ಸರ್ಕಾರದ ಪರವಾಗಿ
ಕನಕಪುರ ಗ್ರಾಮಾಂತರ ಪೋಲೀಸ್ ಠಾಣೆ

**-ವಿರುದ್ಧ-**

**ಆರೋಪಿತ** : ಮಲ್ಲಿಕಾರ್ಜುನ
ಬಿನ್ ಮಹಂತಪ್ಪ,
52 ವರ್ಷ ವಯಸ್ಸು,
ವಾಸಃ ಕಿನ್ನಿಸುಲ್ತಾನ್ ಗ್ರಾಮ,
ಆಳಂದ ತಾಲ್ಲೂಕು,
ಕಲಬುರ್ಗಿ ಜಿಲ್ಲೆ.

**ದೋಷಾರೋಪಣೆ**

**ಶ್ರೀ ವಿನಯ್ ವಿಠ್ಠಲ್ ಕುಂದಾಪುರ್ ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕನಕಪುರ ಆದ ನಾನು, ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,**

ದಿನಾಂಕಃ 04-09-2023 ರಂದು ಮಧ್ಯಾಹ್ನ 02.30 ಗಂಟೆ ಸಮಯದಲ್ಲಿ ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಕನಕಪುರ-ಕೋಡಿಹಳ್ಳಿ ರಸ್ತೆಯಲ್ಲಿ ಚಾಸಾ-1 ರವರು ತಮ್ಮ ಬಾಬ್ತು ಕೆಎ-42-ಇಇ-1555 splendor plus ಮೋಟಾರ್ ಬೈಕ್ ನ್ನು ಟಿ. ಬೇಕುಪ್ಪೆ ಬ್ರಿಡ್ಜ್ ಬಳಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ, ಆರೋಪಿಯಾದ ನೀವು ಸಂಖ್ಯೆಃ ಕೆಎ-42-ಎಫ್-0728 ರ KSRTC ಬಸ್ ಚಾಲಕನು, ತನ್ನ ಬಸ್ಸ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಕೆಎ-42-ಇಇ-1555 splendor plus ಮೋಟಾರ್ ಬೈಕ್ ಗೆ ಡಿಕ್ಕಿ ಹೊಡೆಸಿ, ಅಪಘಾತವನ್ನುಂಟು ಮಾಡಿದ್ದರಿಂದ, ಚಾಸಾ-1 ರವರಿಗೆ ಎಡ ಪಾದದ ಬಳಿ ಸವೆತಗೊಂಡು, ಸಾಧಾರಣ ಸ್ವರೂಪದ ಏಟು ಮತ್ತು ಬಲಗೈ ಬಹು ಸವೆತಗೊಂಡು ಬಲಗಾಲಿನ ಪಾದದ ಬಳಿ ಸೀಳು ಉಂಟಾಗಿ ಬಲ ಮೊಣಕಾಲಿನ ಬಳಿ ಊತವಾಗಿ ಸಾಧಾರಣ ಮತ್ತು ತೀವ್ರ ಸ್ವರೂಪದ ಗಾಯವುಂಟಾಗಿದ್ದು, ಈ ಮೂಲಕ

ಭಾರತೀಯ ದಂಡ ಸಂಹಿತೆ ಕಲಂ.279, 337 ಹಾಗೂ 338 ರಂತೆ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯ ವಿಚಾರಣೆಗೆ ಗುರಿಯಾಗುತ್ತಿದ್ದೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೀದ್ದೇನೆ.

**2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಕನಕಪುರ.**

1. ಪ್ರಶ್ನೆ : ಈಗ ಓದಿ ಹೇಳಿದ ದೋಷಾರೋಪಣಾ ಸಾರಾಂಶ ಅರ್ಥವಾಯಿತೇ ?

ಉತ್ತರಃ ಆರೋಪಿ

2. ಪ್ರಶ್ನೆ : ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರಾ ಅಥವಾ ವಿಚಾರಣೆಯಾಬೇಕೆಂದು ಬಯಸುವಿರಾ ?

ಉತ್ತರಃ ಆರೋಪಿ

(ಈ ಆರೋಪಣೆಯನ್ನು **ದಿನಾಂಕ 09-07-2025** ರಂದು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ ಅವರಿಂದ ಉತ್ತರ ಪಡೆದು ಉತ್ತರವನ್ನು ದಾಖಲಿಸಿದ್ದೇನೆ.)

**2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಕನಕಪುರ.**

ಆರೋಪಿತನ ಸಹಿಃ